ನಂತರ 'ಆಜಾದ್–ಶಾಹಿ' ಬಂತು. ವಿತಸ್ತಾದ ದಡಗಳ ನಡುವೆ ಅಂದಿನಿಂದ ಇದುವರೆಗೆ ಸಾಕಷ್ಟು ನೀರು ಹರಿದಿತ್ತು. ಆಗಾಗ ಅವನಿಗೆ ಕೆಲವು ವಿಷಯಗಳು ಅಪ್ರಿಯವೆಂದೂ ಅನ್ನಿಸಿದ್ದವು. ಮೊನ್ನೆಯ ಸಂಗತಿ. ಅವನು ತನ್ನ ವೋಟು ಹಾಕಲು ಬೂತ್‌ಗೆ ಹೋದಾಗ ವ್ಯಕ್ತಿಯೊಬ್ಬ ಅವನಿಗೆ ಹೇಳಿದ್ದ, "ಪಂಡಿತರೇ, ನೀವೇಕೆ ಕಷ್ಟ ತೆಗೆದುಕೊಂಡಿರಿ? ನಿಮ್ಮ ಕೆಲಸವನ್ನು ನಾವೇ ಮಾಡಿದೆವು. ಏನು ಮಾಡುವುದು, ಹಿರಿಯರ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ!"

ಶ್ರೀಕಂಠನಿಗೆ ತುಂಬಾ ಕೆಡುಕೆನಿಸಿತ್ತು. ಆದರೆ, ವಾದಿಸುವುದು ಉಚಿತವಲ್ಲವೆಂದು ತಿಳಿದ. ಅನಾಯಾಸವಾಗಿ ಅವನ ಕೈ ಪೇಟಾವನ್ನು ಸ್ಪರ್ಶಿಸಿತು. ಪೇಟಾವನ್ನು ತಲೆಯ ಮೇಲೆ ಸರಿಪಡಿಸಿಕೊಂಡು, ಹೊಗೆಗೆ ಹೆದರಿದ ಇಲಿಯಂತೆ ನಾಚಿಕೆಗೆಟ್ಟವನಂತೆ ಮನೆಗೆ ಮರಳಿ ಬಂದಿದ್ದ.

ಆದರೂ ಶ್ರೀಕಂಠನಿಗೆ, ತನ್ನದೇ ಆದ ಜೀವನವಿದೆ, ತನ್ನದೇ ಆದ ವ್ಯಕ್ತಿತ್ವವಿದೆ, ತನ್ನದೇ ಆದ ಸ್ವತಂತ್ರ ಅಸ್ತಿತ್ವವಿದೆ, ತನ್ನದೇ ಆದ ಒಂದು ಪರಿಚಯವಿದೆ ಎಂಬ ವಿಶ್ವಾಸ ಮತ್ತು ಸಂತಸವಿತ್ತು. ಆಲಿಕದಲ್‌ನ ಹಳೆ ಗಲ್ಲಿಯಿಂದ ಸಿವಿಲ್ ಲೈನ್ಸ್‌ವರೆಗೆ ಹೋಗುವಾಗ, ಶ್ರೀಕಂಠನಾದ ನಾನೇ ಹೋಗುತ್ತಿದ್ದೇನೆ, ಬೇರೆಯವರಲ್ಲ ಎಂದು ಅವನಿಗೆ ಅನ್ನಿಸುತ್ತಿತ್ತು. ಪ್ರತಿಯೊಂದು ಗಲ್ಲಿಯಲ್ಲಿ ಕ್ಷೇಮ ಸಮಾಚಾರ ವಿಚಾರಿಸಿ, ಅವನಿಗೆ ಗೌರವ ಸಲ್ಲಿಸಲಾಗುತ್ತಿತ್ತು. ಆದರೆ, ಕೋಲ್ಕತ್ತಾದಲ್ಲಿ ಅವನು ಮತ್ತು ಒಂದು ನೊಣಕ್ಕೆ ಯಾವ ವ್ಯತ್ಯಾಸವೇ ಕಾಣ ಬರುತ್ತಿರಲಿಲ್ಲ. ಒಂದು ವೇಳೆ ಅವನು ಸತ್ತರೆ, ಒಂದು ನೊಣ ಸತ್ತಂತೆಯೇ ಸಾಯುತ್ತಾನೆ. ಸತ್ತವರು ಯಾರು? ಎಂದು ಯಾರು ಕೇಳುತ್ತಾರೆ? ಒಂದು ವೇಳೆ ಕಾಶ್ಮೀರದಲ್ಲಿ ಸತ್ತರೆ, ಅನೇಕ ದಿನಗಳವರೆಗೆ ಇಡೀ ನಗರದಲ್ಲಿ, ಶ್ರೀಕಂಠ ಸ್ವರ್ಗವಾಸಿಯಾದ ಎಂದು ಜನ ಮಾತನಾಡಿಕೊಳ್ಳುತ್ತಾರೆ. ಸ್ಮಶಾನದವರೆಗೆ ಅನೇಕ ಜನ, ಅವನ ಸಂಬಂಧಿಕರು, ನೆರೆಹೊರೆಯವರು, ಹಿಂದೂಗಳು ಮತ್ತು ಮುಸ್ಲಿಮರು ಅವನ ಶವಯಾತ್ರೆಯಲ್ಲಿ ಭಾಗಿಯಾಗುತ್ತಾರೆ. ಅವನಿಗೆ ಒಂದು ಪೇಂಟಿಂಗ್ ನೆನಪಾಗುತ್ತಿತ್ತು, ಅದರಲ್ಲಿ ಒಂದು ವಿಶಾಲ ವೃಕ್ಷ ತನ್ನ ಕೊಂಬೆಗಳನ್ನು ಚಾಚಿರುವಂತೆ ಚಿತ್ರಿಸಲಾಗಿತ್ತು. ಆದರೆ, ಕೆಳಭಾಗದ ಅದರ ಬೇರುಗಳನ್ನೆಲ್ಲಾ ಕತ್ತರಿಸಲಾಗಿತ್ತು. ಆ ಪೇಂಟಿಂಗ್ ಪದೇಪದೇ ಅವನ ಕಣ್ಣುಗಳೆದುರು ಮೂಡುತ್ತಿತ್ತು!

ಶ್ರೀಕಂಠನ ಮಗನೊಬ್ಬ ಜಯಪುರದಲ್ಲಿದ್ದ, ಎರಡನೆಯವನು ಬೆಂಗಳೂರಿನಲ್ಲಿದ್ದ, ಮೂರನೆಯ ಕಿರಿಯ ಮಗ ಇಲ್ಲಿ ಕೋಲ್ಕತ್ತಾದಲ್ಲಿದ್ದ. ಮೂರು ಜನ ಹೆಣ್ಣುಮಕ್ಕಳಿದ್ದರು. ದೊಡ್ಡವಳ ಮದುವೆ ಕಾಶ್ಮೀರದಲ್ಲಾಗಿತ್ತು. ಮಧ್ಯದವಳು ಶಿಮ್ಲಾದಲ್ಲಿದ್ದಳು. ಚಿಕ್ಕವಳು ಅಮೆರಿಕದಲ್ಲಿದ್ದಾಳೆ. ಮಕ್ಕಳು ಉನ್ನತ ಅಥವಾ ಮಹತ್ವದ ಹುದ್ದೆಯಲ್ಲಿರಲಿಲ್ಲ. ಜೀವನ ಹೇಗೋ ಸಾಗುತ್ತಿತ್ತು. ಅವರ ಪರಿಸ್ಥಿತಿ ದಿಕ್ಕು ದಿಸೆಯಿಲ್ಲದ ಹಾದಿಹೋಕನಂತಿತ್ತು. ಇಂದು ಇಲ್ಲಿದ್ದರೆ, ನಾಳೆ ಎಲ್ಲಿರುತ್ತಿದ್ದರೋ ಗೊತ್ತಾಗುತ್ತಿರಲಿಲ್ಲ! ಮಕ್ಕಳು ಎಲ್ಲೆಲ್ಲಿ ಎಡವುವರೋ? ಅವರ ಸಂಪಾದನೆಯ ಅರ್ಧಭಾಗ ಮನೆಯ ಬಾಡಿಗೆಗೇ ಹೋಗುತ್ತಿತ್ತು. ಕಾಶ್ಮೀರದಲ್ಲಿ ಅವರ ಪೂರ್ವಜರ ನೂರು ವರ್ಷದ ಹಿಂದಿನ ವಿಶಾಲ ಮನೆ ಯಾತ್ರಿಕರಿಲ್ಲದ ಛತ್ರದಂತೆ ಖಾಲಿಯಿತ್ತು. ಈಗ ಅದರ ಛಾವಣಿ ಮುರಿದಿತ್ತು. ಮೂರನೆಯ ಅಂತಸ್ತಿನ ಗೋಡೆಗಳು ಮಳೆಯ ಆಘಾತಗಳನ್ನು ಸಹಿಸಿ ಸಹಿಸಿ ದುರ್ಬಲವಾಗಿದ್ದವು. ಆದರೆ, ಸಮಯದ ಹೊಡೆತಗಳನ್ನು ಸಹಿಸುತ್ತಾ ಈಗಲೂ ಅದು ಹಿಂದಿನಂತೆಯೇ ನಿಂತಿತ್ತು. ರಾಮ್ ಕೌಲರ ಬಂಗ್ಲೆಯಂಥ ಮನೆ ಇಡೀ ಮೊಹಲ್ಲಾಕ್ಕೆ ಒಂದು ಉತ್ತಮ ಉದಾಹರಣೆಯಾಗಿತ್ತು. ಅದು ಪ್ರತಿಷ್ಠೆಗೆ ಸಾಕ್ಷಿಯಾಗಿತ್ತು. ಅವರು ತಹಶೀಲ್ದಾರಾಗಿದ್ದರಿಂದ ಒಂದು ದೊಡ್ಡ ಇಲಾಖೆಯ ಅಸಲಿ ಮಹಾರಾಜರೇ ಆಗಿದ್ದರು. ಅವರ ಮನೆಯೊಂದಿಗೆ ಮೊಹಲ್ಲಾದ ಪ್ರತಿಯೊಬ್ಬರಿಗೂ ನಿಕಟ ಸಂಬಂಧವಿತ್ತು. ಯಾರ ಮನೆಯಲ್ಲಿ ವಿವಾಹ–ಸಮಾರಂಭ ನಡೆಯುವುದಿದ್ದರೂ, ರಾಮ್ ಕೌಲರ ಬಂಗ್ಲೆಯಂಥ ಮನೆ ಅವರ ಉಪಯೋಗಕ್ಕೆ ಬರುತ್ತಿತ್ತು. ಪಂಡಿತರು ಮತ್ತು ಮುಸಲ್ಮಾನರ ಅದೆಷ್ಟೋ ದಿಬ್ಬಣಗಳು ಆ ವಿಶಾಲ ಮನೆಯಲ್ಲಿ ಭೋಜನವನ್ನು ಸವಿದಿದ್ದವು. ರಾಮ್ ಕೌಲರ ಬಂಗ್ಲೆ ಮೊಹಲ್ಲಾದ ಹರೆಯದ ಹುಡುಗಿಯರ ಮಧುರ ಕಾಮನೆಗಳ ನಾಲ್ಕು ಗೋಡೆಗಳಾಗಿದ್ದು, ಅವುಗಳನ್ನು ದಾಟುವ ಪದ್ಧತಿಯನ್ನು ಪೂರೈಸಿಯೇ ಅವರು ಇನ್ನೊಂದು ಗಲ್ಲಿಗೆ, ಇನ್ನೊಂದು ಪ್ರದೇಶಕ್ಕೆ,